ಕರ್ತವ್ಯವಾಗಬೇಕು ಎಂಬುದನ್ನು ಅವರದೇ ಭಾಷೆಯಲ್ಲಿ ವಿವರಿಸಿದರು. ಮೇಷ್ಟ್ರು ಹೇಳಿದ ಪಾಠ ತಾನೇ ತಾನಾಗಿ ಇಡೀ ಊರಿಗೆ ಪ್ರಸಾರಗೊಳ್ಳತೊಡಗಿತು.

ಕೆಲದಿನಗಳ ಹಿಂದೆ ತಾಲ್ಲೂಕಿನ ಬಿ.ಡಿ.ಓ ಅವರ ಜೀಪು ಪಂಚಾಯತದ ಕಚೇರಿಯ ಮುಂದೆ ಬಂದು ನಿಂತಿತು. ಚೇರ್ಮನ್ನರ ಎಂದಿನ ಸ್ವಾಗತದ ನಂತರ ಬಿ.ಡಿ.ಓ ಸಾಹೇಬರು ಕೇಳಿದರು: 'ಚೇರ್ಮನ್ರೇ! ನೀವು ಗ್ರಾಮಸಭೆ ಕರೆದದ್ದು ಎಂದು?'

'ನಿಮಗೇ ಗೊತ್ತಲ್ಲ, ಸಾರ್! ಗ್ರಾಮ ಸಭೆಗೆ ಕರೆದ್ರೆ ಒಬ್ಬನೂ ಈ ದಿಕ್ಕಿಗೆ ಹಾಯೋದಿಲ್ಲ. ಈ ಜನಕ್ಕೆ ತಿಳಿವಳಿಕೆ ಕೊಡೋದು ತುಂಬಾ ಕಷ್ಟ.'

ಬಿ.ಡಿ.ಓ ಟೇಬಲ್ ಮೇಲಿದ್ದ ಪೇಪರ್ ಮೇಲೆ ಕಣ್ಣು ಹಾಯಿಸುತ್ತ, 'ನೋಡಿ. ಈ ವರ್ಷದ ಬಜೆಟ್ಟಲ್ಲಿ ಕಾಲುವೆ ನಿರ್ಮಾಣಕ್ಕೆ ರೂ.1,20,000/ ಅಂತ ತೋರಿಸಿದೀರಾ. ಕಾಮಗಾರಿ ಎಷ್ಟಾಗಿದೆ ಅಂತ ನಾನು ನೋಡ್ಬೇಕು. ಏಳಿ, ಹೋಗೋಣ' ಎಂದು ಸಾಹೇಬ್ರು ಎದ್ದರು. ಸೆಕ್ರೆಟರಿಯನ್ನು ನೋಡಿ, 'ಏನಯ್ಯಾ! ಮುಖಾ ನೋಡ್ತಾ ನಿಂತೀದಿಯಾ. ನೀನೂ ಹೊರಡು ಮತ್ತೆ!' ಅಂದ್ರು. ಆತ 'ಸಾರ್! ಅದೂ... ಅದೂ...'ಅಂತ ತೊದಲಿದ. 'ಏನಯ್ಯಾ, ನಿನ್ ರಗಳೆ? ಅದೂ... ಅದೂ ಅಂದ್ರೆ? ಅದೇನಂತ ಹೇಳ್ಬಾರ್ದಾ?' ಅಂತ ಬೈದರು. 'ಸಾರ್! ಈ ಕೆಲಸಕ್ಕೆ ಯಾವ ತುಂಡುಗುತ್ತಿಗೆದಾರರೂ ಮುಂದೆ ಬರ್ಲಿಲ್ಲ. ಕೆಲಸಾ ಪೆಂಡಿಂಗ್ ಇದೆ ಸಾರ್!' ಅಂತ ಒದರಿದ ಸೆಕ್ರೆಟರಿ.

'ಏನ್ರೀ ಚೇರ್ಮನ್ರೇ! ಈತ ಹೇಳೋದು ನಿಜಾನಾ?'

'ಹೌದು ಸಾರ್! ಈ ಹಳ್ಳೀ ಕೊಂಪೆಗೆ ಯಾರೂ ಬರಲ್ಲ ಸಾರ್! ಚಿಂತೆ ಬ್ಯಾಡಾ ಸಾರ್! ನಾಲ್ಕೇ ನಾಲ್ಕು ದಿನ; ಅಷ್ಟೇ. ನಾನು ಕೆಲಸಾ ಮುಗಿಸ್ತೀನಿ ಸಾರ್.'

'ಏನು ಮುಗಿಸ್ತೀರೊ. ನೀವು ಮುಗಿಸೋದು ಸಾಕು; ನೀವೇನೂ ಮಾಡ್ಬೇಡಿ. ನಿಮ್ಮ ಪಂಚಾಯತದ ವಿರುದ್ಧ ಈಗಾಗ್ಲೇ ಸಾಕಷ್ಟು ಕಂಪ್ಲೇಂಟ್ ಇದೆ... ಇಲ್ಲಿ ನಡೆಯೋ ಎಲ್ಲ ಕಾಮಗಾರಿಗಳ ಬಗ್ಗೆ ಯಾರೋ ಮಾಹಿತಿ ಕೇಳಿದ್ದಾರೆ. ನೀವು ವಿಚಾರಣೆ ಎದುರಿಸೋಕೆ ಸಿದ್ಧವಾಗಿರಿ. ಏನಯ್ಯಾ! ಸೆಕ್ರೆಟರಿ! ನೀನಿರೋದು ಯಾಕೆ? ನಿನ್ನ ಮೊದಲು ಇಲ್ಲಿಂದ ಎತ್ತಂಗಡಿ ಮಾಡಿಸ್ತೀನಿ, ನೋಡ್ತಿರು' ಎಂದು ಬೈದು ಹೋದರು.

ಒಂದು ದಿನ ಸಾಯಂಕಾಲ ಮೇಷ್ಟ್ರು ತಿರುಗಾಡಲು ಹೊರಟಾಗ ಬೈಕ್ ಮೇಲೆ ಹೋಗುತಿದ್ದ ಚೇರ್ಮನ್ನರ ಹಿರಿಯ ಮಗ ಮೇಷ್ಟ್ರ ಎದುರಿಗೆ ಬೈಕ್ ನಿಲ್ಲಿಸಿ 'ಏನ್ ಮೇಷ್ಟ್ರೇ! ಊರ ಉದ್ಧಾರಕ್ಕೆ ಹೊರ್ಟ್ರಾ?' ಅಂತ ವ್ಯಂಗ್ಯವಾಡಿದ. ನಕ್ಕ ಮೇಷ್ಟ್ರು, 'ಮತ್ತೆ! ಉದ್ಧಾರಾ ಮಾಡ್ಬೇಕಾದವ್ರು ಸುಮ್ಮನೆ ಕೂತ್ರೆ, ಯಾರಾದ್ರೂ ಮಾಡ್ಬೇಕು ತಾನೇ?' ಅಂದ್ರು. 'ಮಾಡಿ ಮಾಡಿ! ಆದ್ರೆ ಇಷ್ಟೇ. ನಮ್ಮ ಸುದ್ದಿಗೆ ಬರ್ಬೇಡಿ. ಬಂದ್ರೆ ನಾವು ಸುಮ್ಮನಿರೋರೂ ಅಲ್ಲ. ತಿಳ್ಕಳಿ' ಅಂದ. 'ಅಲ್ಲಯ್ಯ! ನಾನ್ಯಾವತ್ತು ನಿಮ್ ವಿಷಯದಲ್ಲಿ ತಲೆ ಹಾಕಿದೀನಿ? ನನ್ನ ಪಾಡಿಗೆ ನಾನು ಕೆಲ್ಸಾ ಮಾಡಿಕೊಂಡು ಹೋಗ್ತಿದೀನಿ; ಅಷ್ಟೆ' ಮೇಷ್ಟ್ರಂದ್ರು. 'ಅಷ್ಟೇ ಮಾಡಿ. ನಮ್ಮ ವಿರುದ್ಧ ಬಿ.ಡಿಓ.ಗೆ ದೂರು ನೀಡಿದೀರಂತೆ! ಏನಾದ್ರೂ ಹೆಚ್ಚುಕಮ್ಮಿ ಆದ್ರೆ ನಮ್ಮನ್ನ ಬೈಬೇಡಿ' ಎನ್ನುತ್ತ ಆತ ವೇಗವಾಗಿ ಬೈಕ್ ಬಿಟ್ಟ.

ಸುತ್ತಲೂ ಚೆಲ್ಲಿದ ಬೆಳಕಿಗೆ ಮುಖ ಮಾಡಿದ ಹಾಗೆ, ನಿದ್ದೆಯಿಂದ ಎದ್ದವರ ಹಾಗೆ, ಊರು ದಿನದಿಂದ ದಿನಕ್ಕೆ ಹೊಸ ಆಕಾರ ತಾಳತೊಡಗಿತು. ಕಸದ ಕೊಂಪೆಯಾಗಿದ್ದ ರಸ್ತೆಗಳು ನಿರ್ಮಲಗೊಂಡವು. ಊರ ಜನರ ನಡುವೆ ಹೊಸ ಬಗೆಯ ಮಾನವೀಯ ಸಂಬಂಧಗಳು